**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 348/2014**

**ಸಾಕ್ಷಿಗೆ ದಿನಾಂಕ 7.1.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಿದ್ದರಾಜು ಎಸ್ | ಪಿ.ಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | : | ಚಿಕ್ಕಸಿದ್ದಯ್ಯ | ಸಿ.ಡಬ್ಲ್ಯೂ-14 |
| ವಯಸ್ಸು | : | 55 | |
| ಉದ್ಯೋಗ | : | ಕಾರ್ಯದರ್ಶಿ | |
| ವಾಸಸ್ಥಳ | : | ಮಲ್ಲಾರ ಕಾಲೋನಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 1997-98 ರಿಂದ ಇಲ್ಲಿಯವರೆಗೆ ಲ್ಯಾಂಪ್ಸ್ ಸೊಸೈಟಿ, ಹೆಚ್.ಡಿ.ಕೋಟೆ ಇಲ್ಲಿ ಮಾರಾಟ ಗುಮಾಸ್ತ ಹಾಗೂ ಪ್ರಭಾರ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಆರೋಪಿಯು 2001 ರಿಂದ 2004 ರವೆರೆಗೆ ಸದರಿ ಸೊಸೈಟಿಯ ಪ್ರಭಾರ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. 2001 ರಿಂದ 2007 ನೇ ಸಾಲಿನವರೆಗೆ ಸದರಿ ಸೊಸೈಟಿಯಲ್ಲಿ ಅವ್ಯವಹಾರವಾಗಿರುವ ಬಗ್ಗೆ ದೂರು ದಾಖಲಾಗಿರುತ್ತದೆ. ದಿನಾಂಕ 4.11.2011 ರಂದು ಹೆಚ್.ಡಿ.ಕೋಟೆ ಪೋಲಿಸ್ ಠಾಣೆಯ ತನಿಖಾಧಿಕಾರಿಯವರು ಲ್ಯಾಂಪ್ಸ್ ಸೊಸೈಟಿಗೆ ಭೇಟಿ ನೀಡಿ ಚಾಸ 18 ರವರು ತೋರಿಸಿದ ಕೃತ್ಯ ನಡೆದ ಸ್ಥಳವನ್ನು ನನ್ನ ಹಾಗೂ ಚಾಸ 15 ರವರ ಸಮಕ್ಷಮ ಪರಿಶೀಲಿಸಿ ಬೆಳಿಗ್ಗೆ 11 ರಿಂದ 11.45 ರವರೆಗೆ ಸ್ಥಳ ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಮಹಜರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಮೂಲ ಮಹಜರು ಸಿ.ಸಿ ನಂ.344/2014 ರಲ್ಲಿ ನಿಶಾನೆಯಾಗಿ ಗುರುತಿಸಿದ್ದು, ಯಥಾ ಪ್ರತಿಯನ್ನು ನಿಪಿ4 ಎಂದು ಗುರುತಿಸಲಾಯಿತು.

ದಿನಾಂಕ 8.3.2013 ರಂದು ಈ ಪ್ರಕರಣದ ಪೋಲಿಸ್ ತನಿಖಾಧಿಕಾರಿಯವರು ಲ್ಯಾಂಪ್ಸ್ ಸೊಸೈಟಿಗೆ ಭೇಟಿ ನೀಡಿ 2001 ರಿಂದ 2007 ನೇ ಸಾಲಿಗೆ ಸಂಬಂಧಪಟ್ಟ ಕ್ಯಾಶ್ ಬುಕ್, ಸ್ಟಾಕ್ ಬುಕ್, ನಡವಳಿ ಪುಸ್ತಕ, ವಾರ್ಷಿಕ ಮಹಾಸಭೆಯ ನಡಾವಳಿ ಪುಸ್ತಕ, ವಿಚಾರಣಾ ವರದಿ, ಆಡಿಟ್ ವರದಿಯನ್ನು ಹಾಜರುಪಡಿಸುವಂತೆ ಕೇಳಿದ್ದು, ನಾನು ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದು ಸದರಿ ಸಮಯದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಚಾಸ 20 ರವರು ಹಾಜರಿದ್ದು ಹಾಗೂ ಪಂಚರಾದ

ಚಾಸ 15 ಮತ್ತು 16 ರವರ ಸಮಕ್ಷಮ ಸದರಿ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆವೆರೆಗೆ ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಮಹಜರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಮೂಲ ಮಹಜರು ಸಿ.ಸಿ ನಂ.344/2014 ರಲ್ಲಿ ನಿಶಾನೆಯಾಗಿ ಗುರುತಿಸಿದ್ದು, ಯಥಾ ಪ್ರತಿಯನ್ನು ನಿಪಿ5 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸದರಿ ದಿನ ಅಮಾನತ್ತುಪಡಿಸಿಕೊಂಡಿರುವ ವಿಚಾರಣಾ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ6 ಎಂದು, 2001-02, 2002-03, 2003-04, 2005-06 ರಿಂದ 2009-10 ನೇ ಸಾಲಿನ ಲೆಕ್ಕಪರಿಶೋಧನ ವರದಿಯನ್ನು ನಿಪಿ7 ರಿಂದ ನಿಪಿ10 ಎಂದು, ದಾಸ್ತಾನು ಪುಸ್ತಕವನ್ನು ನಿಪಿ11 ಎಂದು, 2001-02, 2002-03, 2003-04, 2004-05, 2005 ರಿಂದ 2007 ನೇ ಸಾಲಿನ ನಗದು ಪುಸ್ತಕಗಳನ್ನು ನಿಪಿ12 ರಿಂದ ನಿಪಿ16 ಎಂದು, 2006-07 ನೇ ಸಾಲಿನ ಠರಾವು ಪುಸ್ತಕವನ್ನು ನಿಪಿ17 ಎಂದು, ವಾರ್ಷಿಕ ಮಹಾಸಭೆಯ ಪುಸ್ತಕವನ್ನು ನಿಪಿ18 ಎಂದು ಸಿ.ಸಿ ನಂ.344/2014 ರಲ್ಲಿ ಗುರುತಿಸಲಾಗಿರುತ್ತದೆ. ದಿನಾಂಕ 4.10.1996 ರಿಂದ 24.12.2006 ರವರೆಗಿನ ಠರಾವು ಪುಸ್ತಕವನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿರುತ್ತದೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ